OS8/2019, PW1

**ಸಾಕ್ಷಿಗೆ ದಿನಾಂಕಃ 12.04.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರಃ ಶ್ರೀ. ಎಸ್ ಜಿ ಎಸ್ ವಕೀಲರಿಂದ ಃ**

ದಾವಾ ಆಸ್ತಿ ನಮ್ಮ ತಂದೆಯವರಿಗೆ ಭೂ ಸುಧಾರಣೆ ಕಾಯ್ದೆ ಅಡಿ ಬಂದಿರುತ್ತದೆ. ನನ್ನ ತಂದೆಗೆ ಆಸ್ತಿ ಬಂದ ನಂತರ ಸರ್ವೇ ಆಗಿರುವುದಿಲ್ಲ, ಖಾತೆ ಬದಲಾವಣೆ ಆಗಿರುತ್ತದೆ . ನಾವು 5 ಜನ ಅಣ್ಣತಮ್ಮಂದಿರು. ಸರ್ವೇ ನಂಬರ್ 111 ರಲ್ಲಿ ನನಗೆ 33 ಗುಂಟೆ ಬಂದಿರುತ್ತದೆ. ಸರ್ವೇ ನಂಬರ್ 111 ರಲ್ಲಿ ಪ್ರತಿವಾದಿಯರಿಗೆ 1 ಎಕರೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 39 ಗುಂಟೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ನನಗೆ ಬಂದಿರುವ 33 ಗುಂಟೆಗೆ ಸಂಬಂಧಿಸಿ ಖಾತೆ ಬದಲಾವಣೆಯು ಜುಬಾನೆ ಹಿಸ್ಸೆ ಪತ್ರದ ಪ್ರಕಾರ ಆಗಿರುತ್ತದೆ. ಸದರಿ ಜುಬಾನೆ ಹಿಸ್ಸೆ ಪತ್ರ ನನ್ನ ಬಳಿ ಇರುತ್ತದೆ. ಸದರಿ ಜುಬಾನೆ ಹಿಸ್ಸೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಜುಬಾನೆ ಹಿಸ್ಸೆ ಪತ್ರ ಆದ ನಂತರ ಸರ್ವೇ ನಂಬರ್ 111 ಪೋಡ್ ಆಗಿರುತ್ತದೆ ಎಂದರೆ ಸರಿ. ಪೋಡಾದ ನಂತರ ಸರ್ವೇ ನಂಬರ್ 111/13 ರಲ್ಲಿ ನನಗೆ 20 ಗುಂಟೆ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 20 ಗುಂಟೆ ನನ್ನ ಸ್ವಾಧೀನದಲ್ಲಿ ಇರುತ್ತದೆ 13 ಗುಂಟೆ 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ.

ಸದರಿ 13 ಗುಂಟೆ ಸುಮಾರು 30 ವರ್ಷಗಳ ಹಿಂದಿನಿಂದಲೂ 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು)

**(ದಿನಾಂಕಃ 12.04.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**